

ಎರಡನೇ ಮಹಾಯುದ್ಧದಲ್ಲಿ ಹುತಾತ್ಮರಾದವರಿಗೆ ನಿರ್ಮಿಸಲಾಗಿರುವ 'ಮೆಮೊರಿಯಲ್ ಆಫ್ ಗ್ಲೋರಿ'

ಎರಡನೇ ಮಹಾಯುದ್ಧದಲ್ಲಿ ಹುತಾತ್ಮರಾದ ಗಾರ್ಡುಗಳಿಗೆ ಸಲ್ಲಿಸಿರುವ ಶ್ರದ್ಧಾಂಜಲಿ ಇದು. ಶ್ರದ್ಧಾಂಜಲಿಯ ಪ್ರತೀಕವಾಗಿ ಜ್ಯೋತಿಯೊಂದು ಅನಂತವಾಗಿ ಉರಿಯುತ್ತಿದೆ. ದೇಶಿಯರು, ಪ್ರವಾಸಿಗರು ಹೂವು, ಹೂವಿನ ಮಾಲೆಯನ್ನಿರಿಸಿ ಕೆಲ ಕ್ಷಣ ಮೌನ ತಳೆದು ಹುತಾತ್ಮರಿಗೆ ಮನದಲ್ಲೇ ನಮಿಸುವ ಜಾಗವಿದು.

ಇಲ್ಲಿ ಕಟ್ಟಡವಿಲ್ಲ, ಸ್ಮಾರಕಗಳಿಲ್ಲ, ವಿಶಾಲವಾದ ತೆರೆದ ಮೈದಾನದ ಮೂರು ದಿಕ್ಕಿನಲ್ಲಿ ಮೂರು ಕಂಚಿನ ಉಬ್ಬುಶಿಲ್ಪವಿದೆಯಷ್ಟೆ, ಅದರೊಂದಿಗಿದೆ ಸದಾ ಬೀಸುವ ತಂಗಾಳಿ. ಮೂರೂ ಉಬ್ಬುಶಿಲ್ಪಗಳನ್ನು ವೇದಿಕೆ ಮೇಲೆ ನಿಲ್ಲಿಸಲಾಗಿದೆ. ಮೊದಲನೆಯದು 'ದೀ ಓತ್'. ಇದು ರೆಡ್ ಆರ್ಮಿ ಸೈನಿಕನೊಬ್ಬ ಕುದುರೆ ಮೇಲೆ ಕೂತಿರುವ ಶಿಲ್ಪ. ಕುದುರೆ ಓಟದ ಭಂಗಿಯಲ್ಲಿದೆ, ಸೈನಿಕನ ಮುಖದ ಮೇಲೆ ರೋಷವನ್ನು ನೋಡಬಹುದು. ಮಧ್ಯದಲ್ಲಿರುವುದು 'ದೀ ಡೀಡ್'. ಹಲವು ಸೈನಿಕರಿರುವ ಉಬ್ಬುಶಿಲ್ಪ. ಕೊನೆಯಲ್ಲಿ 'ಟ್ರಂಪೆಟಿಗ್ ಗ್ಲೋರಿ'. ಹೆಸರೇ ಸೂಚಿಸುವಂತೆ ವಿಜಯದ ಕಹಳೆ ಊದುತ್ತಿರುವ ಸೈನಿಕರ ಶಿಲ್ಪ. ಮಧ್ಯದಲ್ಲಿರುವ ದೀ ಡೀಡ್ ಶಿಲ್ಪದ ಮುಂದೆ ತಗ್ಗಿನ ವೇದಿಕೆಯಿದ್ದು ಮಧ್ಯದಲ್ಲಿ ಜ್ವಾಲೆ ಇದೆ. ಮಳೆ ಬರಲಿ, ಚಳಿ ಇರಲಿ, ನಡು ಬೇಸಿಗೆಯೇ ಆಗಿರಲಿ ಜ್ವಾಲೆಯಂತೂ ಉರಿಯುತ್ತಿರುತ್ತದೆ. ಇಷ್ಟಲ್ಲದೆ ಇಲ್ಲೇ ಸೈನಿಕರು ಯಾವ ಊರಿನವರೋ ಆ ಗ್ರಾಮದ ಮಣ್ಣಿರುವ ಪೆಟ್ಟಿಗೆಯೂ ಇದೆ.

ಶ್ರದ್ಧಾಂಜಲಿಯ ದ್ಯೋತಕವಾದ ಈ ಮೆಮೊರಿಯಲ್ ಆಫ್ ಗ್ಲೋರಿಯ ಹಿಂದಿರುವ ಕತೆ ಹೀಗಿದೆ. ಎರಡನೆಯ ಮಹಾಯುದ್ಧದಲ್ಲಿ ಜರ್ಮನಿಯ ನಾಝಿ ಸೈನಿಕರು ರಷ್ಯಾದ ಮಾಸ್ಕೋವನ್ನು ವಶಪಡಿಸಿಕೊಳ್ಳಲು ಮುನ್ನುಗ್ಗಿದಾಗ ಅಲ್ಮಾಟಿ ಪ್ರಾಂತ್ಯದ ಸಣ್ಣ ಸೈನಿಕರ ತಂಡ ಅವರನ್ನು ಸದೆಬಡಿದು ಕೊನೆಯಲ್ಲಿ ವೀರಮರಣ ಹೊಂದಿದರಂತೆ. ಆ ಸೈನಿಕರಿಗೆ ಯುದ್ಧದ ಪರಿಣಿತಿಯಾಗಲಿ, ಸರಿಯಾದ ತರಬೇತಿಯಾಗಲಿ ಇರಲಿಲ್ಲವೆನ್ನುವುದು ಮತ್ತೊಂದು ವಿಶೇಷ.

ಮೊದಲು ಈ ಜಾಗವು ದೊಡ್ಡ ಸ್ಮಶಾನವಾಗಿತ್ತಂತೆ. 1870ರಲ್ಲಿ ಪಾರ್ಕ್ ಆಯಿತು. ಹಲವು ಸಲ ಪಾರ್ಕಿನ ಹೆಸರಿನಲ್ಲೂ ಬದಲಾವಣೆಯಾಯಿತು. 1975ರಲ್ಲಿ 'ಮೆಮೊರಿಯಲ್ ಆಫ್ ಗ್ಲೋರಿ' ಎನ್ನುವ ಹೊಸ ಹೆಸರು ಮತ್ತು ಸೈನಿಕರ ಉಬ್ಬುಶಿಲ್ಪದೊಂದಿಗೆ ಮತ್ತೆ ಸಾರ್ವಜನಿಕರಿಗಾಗಿ ತೆರೆಯಲ್ಪಟ್ಟಿತು. ಇದರ ಹಿಂದಿರುವ ಶಿಲ್ಪಿ ಟಿ.ಕೆ. ಬಾಸಿನೋವ್ ಮತ್ತು ಕಿಮ್. ಸುಮಾರು 18 ಹೆಕ್ಟೇರಿನಷ್ಟು ಜಾಗದಲ್ಲಿ ಓಕ್, ಮೇಪಲ್, ಪೈನ್, ಪರ್ಚ್ ಮರಗಳಿವೆ. ಪಾರ್ಕಿನ ಅಂಚಿನಲ್ಲಿ ಕೆನೆ ಬಣ್ಣದ ಝೆಂಕೋವ್ ಕೆಥೆಡ್ರಲ್, ಹಸಿರು ಟೋಪಿ ಇಟ್ಟಂತಿರುವ ಕಜಕ್ ಮ್ಯೂಸಿಯಂ ಆಫ್ ಫೋಕ್ ಆರ್ಟ್ಸ್ ಕಟ್ಟಡಗಳಿವೆ.

## ಝೆಂಕೋವ್ ಕೆಥೆಡ್ರಲ್

ಇದನ್ನು 'ಅಸೆನ್ಷನ್ ಕೆಥೆಡ್ರಲ್' ಎಂದೂ ಕರೆಯುತ್ತಾರೆ. ಇದು ಕೇವಲ ಧಾರ್ಮಿಕ ಕೇಂದ್ರವಲ್ಲ. ಮನುಷ್ಯನ ಕಲೆ ಮತ್ತು ಕಲೆಗಾರಿಕೆಗೆ ಸಾಕ್ಷಿಯಾಗಿದೆ. ಈ ಕೆಥೆಡ್ರಲ್‌ನ ವಿಶೇಷವೆಂದರೆ ಇದನ್ನು ಸಂಪೂರ್ಣ ಮರದಿಂದ ಕಟ್ಟಲಾಗಿದೆ. ಇಲ್ಲಿ ಮೊಳೆಯನ್ನೇ ಉಪಯೋಗಿಸಿಲ್ಲ ಎನ್ನುತ್ತಾರೆ. ಕೆಥೆಡ್ರಲ್ ರಷ್ಯನ್ ಮತ್ತು ಬೈಜಾಂಟಿನ್ ಶೈಲಿಯಲ್ಲಿದ್ದು ಕಟ್ಟಡದ ಅಂದ ಹಾಗೂ ವಾಸ್ತುಶಿಲ್ಪ ಪ್ರವಾಸಿಗರನ್ನು ಮೂಕವಿಸ್ಮಿತರಾಗಿಸುತ್ತದೆ. ಇದು 'ರಷ್ಯನ್ ಆರ್ಥಡಕ್ಸ್ ಚರ್ಚ್' ಗುಂಪಿಗೆ ಸೇರಿದೆ. ಸುಮಾರು 56 ಮೀಟರ್ ಎತ್ತರವಿರುವ ಇದು ವಿಶ್ವದಲ್ಲೇ ಎರಡನೇ ಅತೀ ಎತ್ತರದ, ಸಂಪೂರ್ಣ ಮರದಿಂದಲೇ ಕಟ್ಟಿದ ಚರ್ಚ್ ಎಂದೂ ಗುರುತಿಸಲ್ಪಟ್ಟಿದೆ. ಎಲ್ಲಾ ಚರ್ಚಿನಲ್ಲೂ ಇರುವಂತೆ ಇಲ್ಲಿಯೂ ಹೊರಗಡೆ ಬೆಲ್ ಟವರ್ ಇದೆ.

ಅಲ್ಮಾಟಿ ಭೂಕಂಪ ಪೀಡಿತ ಪ್ರದೇಶ. 1911ರಲ್ಲಾದ ಅತ್ಯಂತ ದೊಡ್ಡ ಭೂಕಂಪ ಅಲ್ಮಾಟಿಯನ್ನೇ ನಡುಗಿಸಿದರೂ ಕೆಥೆಡ್ರಲ್ ಮಾತ್ರ ಚೂರೂ ಹಾನಿಗೊಳಗಾದಿರುವುದು ಪವಾಡ ಎನ್ನುತ್ತಾರೆ. ಭೂಕಂಪಕ್ಕೆ ಬೆಲ್ ಟವರ್ ಎತ್ತರದ ಮರದಂತೆ ಅಲುಗಾಡಿ ಬಾಗಿದರೂ ಮುರಿಯಲಿಲ್ಲವಂತೆ. ಇದರ ನಿರ್ಮಾಣ 1904ರಲ್ಲಿ ಶುರುವಾಗಿ 1907ರಲ್ಲಿ ಪೂರ್ಣಗೊಂಡಿತು. 1917ರಲ್ಲಿ USSRನಲ್ಲಿ ಕ್ರಾಂತಿ ಶುರುವಾಗಿ ಕಮ್ಯುನಿಸ್ಟ್ ಸರಕಾರ ಅಧಿಕಾರಕ್ಕೆ ಬರುತ್ತಿದ್ದಂತೆ ಈ ಕೆಥೆಡ್ರಲ್ ಮ್ಯೂಸಿಯಂ ಆಯಿತು, ಬೆಲ್ ಟವರ್ ರೇಡಿಯೊ ಪ್ರಸರಣ ಕೇಂದ್ರವಾಯಿತು. ಹಾಗಾಗುವುದು ಆಗ ಸಾಮಾನ್ಯವಾಗಿತ್ತು. 1991ರಲ್ಲಿ USSR 15 ದೇಶಗಳಾಗಿ ಒಡೆದಾಗ ಕಜಕಿಸ್ತಾನ್ ಸಹ ಸ್ವತಂತ್ರ ದೇಶವಾಯಿತು. ಕಮ್ಯುನಿಸಂ ಬದಿಗೆ ಸರಿದು ಗಣತಂತ್ರದ ಸರಕಾರ ಬಂತು. 1995ರಲ್ಲಿ ಝೆಂಕೋವ್ ಕೆಥೆಡ್ರಲ್‌ನ ಅಧಿಕಾರ ರಷ್ಯನ್ ಆರ್ಥಡಕ್ಸ್ ಚರ್ಚಿಗೆ ಬಂತು. ಅದರೊಂದಿಗೆ ರಿಪೇರಿ ಕೆಲಸವೂ ಶುರುವಾಯಿತು. 1997ರಲ್ಲಿ ಮತ್ತೆ ಪ್ರಾರ್ಥನೆ ಶುರುವಾಗಿ ಸಾರ್ವಜನಿಕರಿಗೆ ತೆರೆಯಲ್ಪಟ್ಟಿತು.

ಐದು ಗುಂಬಜಗಳಿರುವ ಇದನ್ನು ಕಂಡಾಗ ಮಾಸ್ಕೋದಲ್ಲಿರುವ ಸೈಂಟ್ ಬಾಸಿಲ್ ಕೆಥೆಡ್ರಲ್ ನೆನಪಾಗದಿರದು. ಕುಶಲಕರ್ಮಿಯ ತಾಳ್ಮೆ, ಬುದ್ಧಿವಂತಿಕೆ, ಚತುರತೆ ಎಲ್ಲವೂ ಜೀವಂತವಾಗಿದೆ ಇಲ್ಲಿ. ಹೊರಭಾಗದಲ್ಲಿ ವಿಶಾಲ ಅಂಗಳವಿದೆ, ಸುತ್ತ ಇರುವ ಮರಗಳ ಹಸಿರು ತೋಟ, ದೂರದಲ್ಲಿ ಕಾಣುವ ಟಿಯಾನ್ ಶಾನ್ ಪರ್ವತ ಶ್ರೇಣಿ ಕೆಥೆಡ್ರಲ್‌ನ ಭವ್ಯತೆಯನ್ನು ಹೆಚ್ಚಿಸಿದೆ.

ಕೆಥೆಡ್ರಲ್‌ನ ಒಳಭಾಗ ಶ್ರೀಮಂತ ಶಾಂಡಲಿಯಾರುಗಳು, ಬಣ್ಣದ ಗ್ಲಾಸುಗಳು, ಮುಚ್ಚಿಗೆಯಲ್ಲಿ, ಗೋಡೆಗಳಲ್ಲಿ ಪೇಂಟಿಂಗ್ ಹಾಗೂ ಗಾಢ ಬಣ್ಣಗಳಿಂದ ಅಲಂಕೃತಗೊಂಡಿದೆ. ಕ್ಯಾಂಡಲನ್ನು ಹಚ್ಚಿ ನಮಸ್ಕರಿಸುವ ದೇಶ, ವಿದೇಶಿ ಪ್ರವಾಸಿಗರೇ ದಂಡೇ ಸದಾ ಇರುತ್ತದಿಲ್ಲಿ. ಇಲ್ಲಿನ ನಿರ್ಮಲ, ಶಾಂತ ವಾತಾವರಣ ಪ್ರವಾಸಿಗರನ್ನು ಮೌನವಾಗಿರಿಸುತ್ತದೆ. ■